


ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಮೂರನೇ ಸ್ಥಾನ ಗಳಿಸಿದ ಕರ್ನಾಟಕ ತಂಡದ ಆಟಗಾರರು

ಕ್ರಿಕೆಟ್, ಟೆನ್‌ಪಿನ್, ಓಟ, ಡಿಸ್ಕಸ್ ಥ್ರೋ ಮುಂತಾಗಿ ಬಹುವಿಧ ಕ್ರೀಡೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಡಿಸ್ಕಸ್ ಥ್ರೋದಲ್ಲಿ ಅಂತರರಾಷ್ಟ್ರೀಯ ಮಟ್ಟದ ಚಿನ್ನ, ಇತರ ಕ್ರೀಡೆಗಳಲ್ಲಿ ರಾಷ್ಟ್ರೀಯ ಮಟ್ಟದ ಮೂರು ಪದಕ ಗೆದ್ದಿರುವ ಅವರ ಬದುಕೂ ಪ್ಯಾರಾ ಕಬಡ್ಡಿಯಿಂದಾಗಿ ಯು–ಟರ್ನ್ ತೆಗೆದುಕೊಂಡಿದೆ.

ಎಂಎಸ್‌ಡಬ್ಲ್ಯು ಮಾಡಿ ಪ್ಯಾರಾ ಅಥ್ಲೆಟಿಕ್ಸ್‌ನ ಜಾವೆಲಿನ್ ಥ್ರೋದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆದ್ದಿರುವ ಕಲಬುರಗಿ ಕೊರಂಟಿ ತಾಂಡಾದ ರಮೇಶ್‌ಗೂ ಕಬಡ್ಡಿ ಮೇಲೆ ಅತಿಯಾದ ಪ್ರೀತಿ. ಅವರಂಥ ಅನೇಕರಿಗೂ ಪ್ಯಾರಾ ಕಬಡ್ಡಿ ಅವಕಾಶಗಳ ಬಾಗಿಲು ತೆರೆದಿಟ್ಟಿದೆ. ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಹಿಮಾಚಲ ಪ್ರದೇಶ ಚಾಂಪಿಯನ್ ಆಗಿದ್ದು ಕರ್ನಾಟಕ ಮೂರನೇ ಸ್ಥಾನ ಗಳಿಸಿದೆ.

### ಫೆಡರೇಷನ್‌ಗೆ 23ನೇ ಕ್ರೀಡೆ

ಭಾರತ ಪ್ಯಾರಾಲಿಂಪಿಕ್ ಸಮಿತಿಯಲ್ಲಿ ಈವರೆಗೆ ಒಟ್ಟು 22 ಕ್ರೀಡೆಗಳು ಇದ್ದವು. ಈಗ ಕಬಡ್ಡಿಯನ್ನೂ ಸೇರಿಸಲಾಗಿದೆ. ಹಲವು ವರ್ಷಗಳ ಪ್ರಯತ್ನದ ಫಲವಾಗಿ ಕಬಡ್ಡಿಯನ್ನು ಒಂದು ವರ್ಷದ ಹಿಂದೆ ಸೇರ್ಪಡೆಗೊಳಿಸಲಾಗಿದೆ. ಆದರೆ ಸ್ಪರ್ಧೆಯನ್ನು ಆಯೋಜಿಸಲು ಕಾಲ ಕೂಡಿ ಬಂದಿರಲಿಲ್ಲ. ಈ ಕಾರಣದಿಂದ ಮೊಹಾಲಿಯಲ್ಲಿ ನಡೆದ ರಾಷ್ಟ್ರೀಯ ಪ್ಯಾರಾ ಕಬಡ್ಡಿ ಚಾಂಪಿಯನ್‌ಷಿಪ್ ವಿಶಿಷ್ಟವಾದುದು ಎಂಬುದು ರಾಷ್ಟ್ರೀಯ ಪ್ಯಾರಾ ಕಬಡ್ಡಿ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ನರೇಂದ್ರ ರಾಣಾ ಅವರ ಅಭಿಮತ. ಪ್ಯಾರಾ ಕಬಡ್ಡಿ ಆಟಗಾರರ ಬದುಕಿಗೆ ಇದು ಮಹತ್ವದ ತಿರುವು ನೀಡಲಿದೆ ಎಂದು ಹೇಳುತ್ತಾರೆ ಅವರು. ಚಾಂಪಿಯನ್‌ಷಿಪ್ ನಂತರ ಸಂಘಟಕರ ಉತ್ಸಾಹವೂ ಹೆಚ್ಚಾಗಿದ್ದು ಹಲವು ಕೂಟಗಳ ಆಯೋಜನೆಗೆ ಯೋಜನೆಗಳು ಸಿದ್ಧವಾಗುತ್ತಿವೆ.

## ಮಂಗಳೂರಿನಲ್ಲಿ ಫೆಡರೇಷನ್ ಕಪ್

ಭಾರತ ಪ್ಯಾರಾ ಅಮೆಚೂರ್ ಕಬಡ್ಡಿ ಫೆಡರೇಷನ್ ಆಶ್ರಯದಲ್ಲಿ ಕರ್ನಾಟಕ ರಾಜ್ಯ ಅಮೆಚೂರ್ ಪ್ಯಾರಾ ಕಬಡ್ಡಿ ಸಂಸ್ಥೆ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪ್ಯಾರಾ ಅಮೆಚೂರ್ ಕಬಡ್ಡಿ ಸಂಸ್ಥೆ ಆಯೋಜಿಸುವ ಪ್ರಪ್ರಥಮ ಫೆಡರೇಷನ್ ಕಪ್ ಪ್ಯಾರಾ ಕಬಡ್ಡಿ ಟೂರ್ನಿಗೆ ಕಡಲ ನಗರಿ ಮಂಗಳೂರು ಆತಿಥ್ಯ ವಹಿಸಲಿದೆ.

ಮಂಗಳೂರು ನಗರಕ್ಕೆ ಹೊಂದಿಕೊಂಡಿರುವ ಉಳ್ಳಾಲದ ಶ್ರೀ ಉಮಾಮಹೇಶ್ವರಿ ಕಬಡ್ಡಿ ಅಕಾಡೆಮಿಯ ದಶಮಾನೋತ್ಸವ ಸಂಭ್ರಮದ ಅಂಗವಾಗಿ ಉಳ್ಳಾಲ ಕಡಲತೀರದಲ್ಲಿ ಸೆಪ್ಟೆಂಬರ್ 25, 26 ಮತ್ತು 27ರಂದು ಟೂರ್ನಿ ನಡೆಯಲಿದೆ.

### ಕರ್ನಾಟಕ ಸಂಸ್ಥೆಗೂ ಮಾನ್ಯತೆ

ರಾಷ್ಟ್ರೀಯ ಚಾಂಪಿಯನ್‌ಷಿಪ್‌ವರೆಗೆ ಫೆಡರೇಷನ್ ಅಡಿಯಲ್ಲಿ ಕರ್ನಾಟಕ ರಾಜ್ಯ ಸಂಸ್ಥೆ ಕಾರ್ಯನಿರ್ವಹಿಸುತ್ತಿತ್ತು. ನಂತರ ಅಂಗಸಂಸ್ಥೆಯಾಗಿ ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಸಂಸ್ಥೆ ಸಂಯೋಜನೆಗೊಂಡ ಕುರಿತ ಪತ್ರ ರವಾನಿಸಲಾಗಿದೆ.

‘ಈಗ ಕರ್ನಾಟಕ ರಾಜ್ಯ ಸಂಸ್ಥೆಯೂ ಸ್ವತಂತ್ರ ಅಂಗಸಂಸ್ಥೆಯಾಗಿದೆ. ರಾಜ್ಯದಲ್ಲೂ ಪ್ಯಾರಾ ಕಬಡ್ಡಿ ಬೆಳೆಸಲು ಪ್ರಯತ್ನಿಸಲಾಗುವುದು ಎಂದು ಮೊಹಾಲಿ ಚಾಂಪಿಯನ್‌ಷಿಪ್‌ಗೆ ಆಯ್ಕೆ ಪ್ರಕ್ರಿಯೆ ನಡೆಸಿಕೊಟ್ಟ ಅಂತರರಾಷ್ಟ್ರೀಯ ಕಬಡ್ಡಿ ಆಟಗಾರ ಸಿ. ಹೊನ್ನಪ್ಪ ತಿಳಿಸಿದರು.

ಕಬಡ್ಡಿ ಆಡಿದರೆ ಕೈಕಾಲು ಮುರಿಯುತ್ತದೆ ಎಂದು ಹೆದರಿ ಈ ಕ್ರೀಡೆಯತ್ತ ಮಕ್ಕಳನ್ನು ಕಳುಹಿಸಲು ಪೋಷಕರು ಹಿಂದೇಟು ಹಾಕುತ್ತಾರೆ. ಈಗ, ಕೈಕಾಲು ಕಳೆದುಕೊಂಡವರೇ ಆಡಲು ಮುಂದಾಗಿದ್ದಾರೆ. ಆ ಧೈರ್ಯವನ್ನು ಮೆಚ್ಚಲೇಬೇಕು. ಬದುಕಿನಲ್ಲಿ ಅನುಭವಿಸುತ್ತಿರುವ ನೋವು ಮರೆಯಲು ಅವರಿಗೆ ಇದೊಂದು ಅವಕಾಶ’ ಎಂಬುದು ಹೊನ್ನಪ್ಪ ಅವರ ಅಭಿಪ್ರಾಯ.

